ಎಕರೆಯನ್ನು ಕಬಳಿಸಿದ್ದಾರೆ. ದುರಾದೃಷ್ಟವಶಾತ್ ಈಗ ಸಚಿವರು ಅಲ್ಲಿ ಯಾವುದೇ ವ್ಯವಸಾಯ ಕ್ಷೇತ್ರ ಇಲ್ಲವೆಂದು ಹೇಳುತ್ತಿದ್ದಾರೆ. ಆದುದರಿಂದ, ಅದರ ಬಗ್ಗೆ ಪೂರ್ಣ ತನಿಖೆ ನಡೆಸಿ ಸರಿಯಾದ ಮಾಹಿತಿ ನೀಡಬೇಕೆಂದು ತಮ್ಮ ಮೂಲಕ ಅವರನ್ನು ಕೋರುತ್ತಿದ್ದೇನೆ.

ಶ್ರೀ ಎನ್. ಚಿಕ್ಕೇಗೌಡ:- ಮಾನ್ಯ ಅಧ್ಯಕ್ಷರೇ ಶ್ರೀಯುತ ಅಂಜನಮೂರ್ತಿಯವರು ಎಷ್ಟು ಅಗ್ರಿಕಲ್ಚರ್ ಫಾರ್ಮ್ಸ್ ಇದೆ ಎಂದು ಕೇಳಿದ್ದಾರೆ. ಬಹುಶಃ ಅದರ ಅರ್ಥ ನಿಮ್ಮ ಮತಕ್ಷೇತ್ರದಲ್ಲಿ ಬಹಳಷ್ಟು ಇದೆ. ನೀವು ಅಗ್ರಿಕಲ್ಚರ್ ಫಾರ್ಮ್ಸ್ ಕೇಳಿದ್ದೀರೆಂದು ನಾನು ಭಾವಿಸಿದ್ದೇನೆ. ತಾವು ಹೇಳಿರುವಂತೆ ಅಡಕಮಾರನಹಳ್ಳಿಯಲ್ಲಿ ಸರ್ಕಾರದವರು ತೆಗೆದುಕೋಡು ವ್ಯವಸಾಯ ಇಲಾಖೆಯವರು ಅದಕ್ಕೆ ಫೆನ್ಸಿಂಗ್ ಮತ್ತು ಬೋರ್‌ವೆಲ್ ಹಾಕಿರುವುದು ನನ್ನ ಗಮನಕ್ಕೆ ಬಂದಿಲ್ಲ. ಈ ರೀತಿ ಫೆನ್ಸಿಂಗ್ ಮತ್ತು ಬೋರ್‌ವೆಲ್ ಹಾಕಿ ಜಮೀನನ್ನು ವಶಕ್ಕೆ ತೆಗೆದುಕೊಂಡು ಯಾರಾದರೂ ಒತ್ತುವರಿ ಮಾಡಿಕ್ಕೊಂಡಿದ್ದರೆ, ಅದನ್ನು ತಕ್ಷಣ ಬಿಡುಗಡೆ ಮಾಡುವುದಕ್ಕೂ ಅಡಕಮಾರನಹಳ್ಳಿಯಲ್ಲಿರುವ ಜಮೀನಿನಲ್ಲಿ ವ್ಯವಸಾಯದ ಫಾರ್ಮ್ ಮಾಡಬಹುದೇ ಎನ್ನುವುದರ ಬಗ್ಗೆ ತಕ್ಷಣ ಪರಿಶೀಲಿಸಿ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಅಂಜನಮೂರ್ತಿ:- ನೀವು ಇದರ ಬಗ್ಗೆ ಸ್ಪಷ್ಟ ನಿಲುವು ತೋರಿಸಿದರೆ, "ಆಶ್ರಯ" ಯೋಜನೆಯಡಿಯಲ್ಲಿ ಸೈಟ್ ಮಾಡುವುದಕ್ಕೆ ನಾವು ಪ್ರಯತ್ನ ಮಾಡುತ್ತೇವೆ. ಆ ಜಮೀನು ನಿಮಗೆ ಸೇರಿದೆಯೇ, ಇಲ್ಲವೇ ಎನ್ನುವುದರ ಬಗ್ಗೆ ಮಾಹಿತಿ ಕೊಡಬೇಕೆಂದು ಕೋರುತ್ತೇನೆ.

ಶ್ರೀ ಎನ್. ಚಿಕ್ಕೇಗೌಡ:- "ಆಶ್ರಯ" ಯೋಜನೆಯಡಿಯಲ್ಲೇ?

ಶ್ರೀ ಅಂಜನಮೂರ್ತಿ:- ನಿಮಗೆ ಆ ಜಮೀನು ಸೇರಿಲ್ಲವೆಂದರೆ, "ಆಶ್ರಯ" ಯೋಜನೆಯಲ್ಲಿ ಸೇರಿಸಿ, ಬಡವರಿಗೆ ಸೈಟನ್ನು ಹಂಚುತ್ತೇವೆ.

ಶ್ರೀ ಎನ್. ಚಿಕ್ಕೇಗೌಡ:- ಆ ಜಮೀನು ನನಗೆ ಸೇರದೇ ಇದ್ದರೆ, ಬಹುಶಃ ಸಂಬಂಧಪಟ್ಟ ಯಾವ ಇಲಾಖೆ ಸೇರುತ್ತದೆಯೋ, ಅಲ್ಲಿಂದ ಅನುಮತಿ ಪಡೆದು "ಆಶ್ರಯ" ಯೋಜನೆಯಲ್ಲಿ ಸೈಟ್ ಮಾಡಿ ಕೊಡುದರಲ್ಲಿ ನಾನು ನಿಮ್ಮ ಜೊತೆಯಲ್ಲಿ ಭಾಗಿಯಾಗುತ್ತೇನೆ.

ರಾಜ್ಯದಲ್ಲಿ ಕಬ್ಬು ಉತ್ಪಾದನೆ.

452 (2134)ಶ್ರೀ ಕೆ. ಹರ್ಷಕುಮಾರ್ ಗೌಡ (ಚಾಮರಾಜ)

ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:-

ಅ) ಕರ್ನಾಟಕ ರಾಜ್ಯದಲ್ಲಿ ಪ್ರತಿವರ್ಷ ಎಷ್ಟು ಲಕ್ಷ ಟನ್ ಕಬ್ಬಿನ ಬೆಳೆ ಬೆಳೆಯಲಾಗುವುದು?

ಆ) ಈ ಕಬ್ಬಿನ ಬೆಳೆಯನ್ನು ರಾಜ್ಯದ ಕೈಗಾರಿಕೆಗಳು ಎಷ್ಟು ಲಕ್ಷ ಟನ್ ಉಪಯೋಗಿಸುತ್ತವೆ ಹಾಗೂ ಹೊರ ರಾಜ್ಯಗಳಿಗೆ ನಮ್ಮ ರಾಜ್ಯದಿಂದ ಪ್ರತಿ ವರ್ಷ ಸರಬರಾಜಾಗುವ ಕಬ್ಬಿನ ಬೆಳೆ ಎಷ್ಟು;

ಇ) ನಮ್ಮ ರಾಜ್ಯದ ಕಬ್ಬನ್ನು ಖರೀದಿಸುವ ಹೊರ ರಾಜ್ಯಗಳು ಯಾವುವು?

ಶ್ರೀ ಎನ್. ಚಿಕ್ಕೇಗೌಡ(ಕೃಷಿ ಸಚಿವರು)-

ಅ) ಕರ್ನಾಟಕ ರಾಜ್ಯದಲ್ಲಿ ಪ್ರತಿ ವರ್ಷ ಸರಾಸರಿ 200 ಲಕ್ಷ ಟನ್ ಕಬ್ಬು ಉತ್ಪಾದನೆಯಾಗುತ್ತದೆ.

ಆ) ಈ ಕಬ್ಬಿನ ಬೆಳೆಯಲ್ಲಿ ರಾಜ್ಯದ ಕೈಗಾರಿಕೆಗಳು ಸುಮಾರು 175 ಲಕ್ಷ ಮೆಟ್ರಿಕ್ ಟನ್ ಕಬ್ಬನ್ನು ಉಪಯೋಗಿಸುತ್ತಿದೆ ಹಾಗೂ ಹೊರ ರಾಜ್ಯಕ್ಕೆ ಸುಮಾರು 10 ರಿಂದ 12 ಲಕ್ಷ ಮೆಟ್ರಿಕ್ ಟನ್ ಕಬ್ಬು ಸರಬರಾಜಾಗುತ್ತದೆ.

ಶ್ರೀ ಕೆ. ಹರ್ಷಕುಮಾರ್ ಗೌಡ:- ಮಾನ್ಯ ಉಪಾಧ್ಯಕ್ಷಿಣಿಯವರೇ, ಕರ್ನಾಟಕ ರಾಜ್ಯದಲ್ಲಿ ವರ್ಷವೊಂದಕ್ಕೆ ಎಷ್ಟು ಲಕ್ಷ ಟನ್ ಕಬ್ಬನ್ನು ಬೆಳೆಯಲಾಗುವುದು ಎಂದು ಕೇಳಿದ್ದಕ್ಕೆ , ಉತ್ತರವಾಗಿ 200 ಲಕ್ಷ ಟನ್ ಕಬ್ಬನ್ನು ಬೆಳೆಯಲಾಗುವುದೆಂದು ಹೇಳಿದ್ದಾರೆ. ಹಾಗೆಯೇ ರಾಜ್ಯದ ಕೈಗಾರಿಕೆಗಳಲ್ಲಿ 175 ಲಕ್ಷ ಟನ್ ಕಬ್ಬನ್ನು ಉಪಯೋಗಿಸಲಾಗುತ್ತಿದೆ ಎಂದು ಹೇಳಿದ್ದಾರೆ. ಹೊರ ರಾಜ್ಯಕ್ಕೆ ಸುಮಾರು 10 ರಿಂದ 12ಲಕ್ಷ ಮೆಟ್ರಿಕ್ ಟನ್ ಕಬ್ಬನ್ನು ರಫ್ತು ಮಾಡಲಾಗುತ್ತಿದೆ ಎಂದು ಹೇಳಿದ್ದಾರೆ. ಆದರೆ, ನಾನು ಕೇಳುವುದು ಏನೆಂದರೆ ಈ 200 ಲಕ್ಷ ಟನ್ ಕಬ್ಬಿನ ಮೂಲಕ ರಾಜ್ಯದಲ್ಲಿ ಎಷ್ಟು ಟನ್ ಸಕ್ಕರೆ ಉತ್ಪಾದನೆ ಮಾಡುತ್ತಿದ್ದಾರೆ ಎಂಬುದರ ಬಗ್ಗೆ ಸರ್ಕಾರದಲ್ಲಿ ಮಾಹಿತಿ ಇದೆಯೇ? ಎರಡನೆಯದಾಗಿ, ಕರ್ನಾಟಕ ರಾಜ್ಯದಲ್ಲಿ ಪ್ರಸಕ್ತ ಉತ್ಪಾದಿಸುವ ಕಾರ್ಖಾನೆಗಳು ಏನು ಕಬ್ಬನ್ನು ಅರೆಯುತ್ತಿವೆ? ಸಕ್ಕರೆಯನ್ನು ಹೆಚ್ಚಿಗೆ ಉತ್ಪಾದನೆ ಮಾಡುವಂತ ಸಾಮರ್ಥ್ಯ ಈ ಕಾರ್ಖಾನೆಗಳಿಗೆ ಬರುವಂತೆ ಮಾಡುವುದಕ್ಕೆ ಸರ್ಕಾರಕ್ಕೆ ಸಾಧ್ಯವಿದಯೇ? ಮೂರನೆಯದಾಗಿ, ಈಗ ರೈತ ಏನು ಕಬ್ಬನ್ನು ಬೆಳೆಯುತ್ತಾನೆ, ಅದನ್ನು ಸಕಾಲಕ್ಕೆ ಕಟಾವು ಮಾಡಿ, ಆ ಕಟಾವು ಮಾಡಿದ ಕಬ್ಬನ್ನು ಸಕಾಲಕ್ಕೆ ಅರೆಯದೆ ಹೋದಾಗ, ಸಕ್ಕರೆ ಉತ್ಪಾದನೆ ಕೂಡ ಕುಂಠಿತವಾಗುತ್ತದೆ; ಅಲ್ಲದೆ, ರೈತ ಕೂಡ ಶೋಷಣೆಗೆ ಒಳಗಾಗುತ್ತಾನೆ. ಆದ್ದರಿಂದ ಸಕಾಲದಲ್ಲಿ ಸಕ್ಕರೆಯನ್ನು ಅರೆಯದೆ ಹೋದರೆ ರೈತ ನಷ್ಟಕ್ಕೆ ಒಳಗಾಗುತ್ತಾನೆ. ಅದಕ್ಕೆ ಸರ್ಕಾರ ಏನು ಕ್ರಮ ಕೈಗೊಂಡಿದೆ ಎಂಬುದನ್ನು ತಿಳಿಸಬೇಕೆಂದು ತಮ್ಮ ಮೂಲಕ ಅವರಲ್ಲಿ ಪ್ರಾರ್ಥಿಸಿಕೊಳ್ಳುತ್ತೇನೆ.

ಶ್ರೀ ಎನ್. ಚಿಕ್ಕೇಗೌಡ:- ಮಾನ್ಯ ಉಪಾಧ್ಯಕ್ಷಿಣಿಯವರೇ, ಶ್ರೀಯುತ ಹರ್ಷಕುಮಾರ್ ಗೌಡರವರು ಕೇಳಿದಂಥ ಪ್ರಶ್ನೆಗಳಿಗೆ ನನ್ನ ಮೊದಲನೆಯ ಉತ್ತರ ಏನೆಂದರೆ, 1990-91ನೇ ಸಾಲಿನಲ್ಲಿ198 ಲಕ್ಷ ಟನ್ ಕಬ್ಬನ್ನು ಉತ್ಪಾದನೆ ಮಾಡಿದ್ದೇವೆ. 1.54 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಸುಮಾರು 200 ಲಕ್ಷ ಟನ್ ಕಬ್ಬನ್ನು ಬೆಳೆದಿದ್ದೇವೆ. ಪ್ರತಿ ವರ್ಷ ಬೆಳೆದಂಥ ಕಬ್ಬಿನ ಪೈಕಿ ಸರಾಸರಿ ಈ ಕೆಳಕಂಡಂತೆ ನಮ್ಮ ಕಾರ್ಖಾನೆಗಳು ಉಪಯೋಗಿಸುತ್ತಿವೆ.

ಸಕ್ಕರೆ ಕಾರ್ಖಾನೆಗಳು ಉಪಯೋಗಿಸುವ ಕಬ್ಬು	-	100 ಲಕ್ಷ ಟನ್
ಖಂಡಸಾರಿ ಕಾರ್ಖಾನೆಗಳು ಉಪಯೋಗಿಸುವ ಕಬ್ಬು	-	15 ಲಕ್ಷ ಟನ್
ಬೆಲ್ಲ ತಯಾರಿಕೆಗೆ ಉಪಯೋಗಿಸುವ ಕಬ್ಬು	-	60 ಲಕ್ಷ ಟನ್

ಬಿತ್ತನೆ ಬೀಜಕ್ಕೆ 10 ಲಕ್ಷ ಟನ್, ಹೊರರಾಜ್ಯಗಳಾದ ತಮಿಳುನಾಡು, ಮಹಾರಾಷ್ಟ್ರ, ಗೋವಾ, ಈ ಮೂರು ರಾಜ್ಯಗಳಿಗೆ ಸುಮಾರು 12 ಲಕ್ಷ ಟನ್ ಹೆಚ್ಚುವರಿ ಕಬ್ಬನ್ನು ಕೊಡುತ್ತೇವೆ. ಕಬ್ಬನ್ನು ಸಕಾಲದಲ್ಲಿ ಕಟಾವು ಮಾಡದಿದ್ದರೆ ಆದು ಒಣಗಿಹೋಗುತ್ತದೆ. ಇದರಿಂದಾಗಿ ಅದರಲ್ಲಿರುವ ಗ್ಲೂಕೋಸ್ ಕಂಟೆಂಟ್ಸ್ ದಿನಗಳು ಕಳೆದಂತೆ ಕಡಿಮೆಯಾಗುತ್ತದೆ. ಹೀಗಾಗಿ ಸಕ್ಕರೆಯ ಉತ್ಪಾದನೆಯ ಇಳುವರಿಯಲ್ಲಿ ಕಡಿಮೆ ಬರುತ್ತದೆ. ಅದಕ್ಕೋಸ್ಕರ ನಾವು ಹೊರರಾಜ್ಯಗಳಿಗೆ ಕಬ್ಬನ್ನು ಕೊಟ್ಟು ಅವರಿಂದ ಪರ್ಚೆಸ್ ಟ್ಯಾಕ್ಸ್‌ನ್ನು ತೆಗೆದುಕೊಳ್ಳುತ್ತಿರತಕ್ಕದ್ದು ಇದೆ. ಆದರೆ ಈಗ ನಮ್ಮ ಸರ್ಕಾರ ಮಹಾರಾಷ್ಟ್ರ, ಗೋವಾ ರಾಜ್ಯಗಳಿಗೆ ಹೋಗತಕ್ಕ ಕಬ್ಬಿನ ಮೇಲೆ ಅವರಿಂದ ಪರ್ಚೆಸ್ ಟ್ಯಾಕ್ಸ್ ತೆಗೆದುಹಾಕಿದ್ದೇವೆ. ಆದರಿಂದ ಆವರಿಗೆ ಉತ್ತೇಜನಕಾರಿ ಫಲ ದೊರಕುತ್ತದೆ.ಮತ್ತೆ ಈಗ ಹಾಲಿ ಕಬ್ಬನ್ನು ಅರೆಯತಕ್ಕ ಕಾರ್ಖಾನೆಗಳೇನಿವೆ ಅದರಲ್ಲಿ ಕಬ್ಬನ್ನು ಅರೆಯುವ ಶಕ್ತಿಯನ್ನು ಹೆಚ್ಚಿಸಲಾಗುವುದಿಲ್ಲವೇ ಎಂದು ಪ್ರಶ್ನೆಯನ್ನು ಕೇಳಿದ್ದಾರೆ. ಅದನ್ನು ಹೆಚ್ಚಿಸಲು ಆಗುತ್ತದೆ. ಇವತ್ತು ತಮಗೆ ಗೊತ್ತಿರುವಂತೆ ಮಂಡ್ಯ ಜಿಲ್ಲೆಯ ಪಾಂಡವಪುರ ಸಕ್ಕರೆ ಕಾರ್ಖಾನೆಯಲ್ಲಿ ಎಕ್ಸ್‌ಪ್ಯಾನ್‌ಷನ್ ಸ್ಕೀಮನ್ನು ತೆಗೆದುಕೊಂಡಿದ್ದಾರೆ. ಅವರು ಕಬ್ಬನ್ನು ಅರೆಯುವ ಸಾಮರ್ಥ್ಯವನ್ನು

ಹೆಚ್ಚಿಸುವುದಕ್ಕೋಸ್ಕರ ಕಾರ್ಖಾನೆಯನ್ನು ನವೀಕರಿಸುವುದನ್ನು ಮತ್ತು ಇನ್ನೂ ಹೆಚ್ಚು ಯಂತ್ರಗಳನ್ನು ಉಪಯೋಗಿಸಿ ಹೆಚ್ಚು ಕಬ್ಬನ್ನು ಅರೆಯುವ ಕ್ರಮ ತೆಗೆದುಕೊಂಡಿದ್ದಾರೆಂಬುದು ಕಂಡುಬಂದಿದೆ.

ಶ್ರೀ ಕೆ. ಹರ್ಷಕುಮಾರ ಗೌಡ:- ಸಕ್ಕರೆ ಉತ್ಪಾದನೆ ಎಷ್ಟು ಆಗುತ್ತದೆ? ಕರ್ನಾಟಕ ರಾಜ್ಯದಲ್ಲಿ ಎಷ್ಟು ಪ್ರಮಾಣದಲ್ಲಿ ಕಬ್ಬನ್ನು ಅರೆಯುತ್ತಾರೆ ಮತ್ತು ಅದರಿಂದ ಎಷ್ಟು ಪ್ರಮಾಣದಲ್ಲಿ ಸಕ್ಕರೆ ಉತ್ಪಾದನೆಯಾಗುತ್ತದೆ ಎನ್ನುವ ಬಗ್ಗೆ ದಯಮಾಡಿ ಆಮೇಲೆ ಉತ್ತರ ಹೇಳಿ. ಆದರೆ ಇವತ್ತು ಕರ್ನಾಟಕ ರಾಜ್ಯದ ಸಕ್ಕರೆ ಕಾರ್ಖಾನೆಯಲ್ಲಿ ಉತ್ಪಾದನೆಯ ಸಾಮರ್ಥ್ಯ ಕುಂಠಿತವಾಗಲು ಕಾರಣವೇನೆಂದರೆ ಅಲ್ಲಿನ Cane Superintendent ಮೇಲೆ ಅವನ ಮ್ಯಾನೇಜ್‌ಮೆಂಟ್ ಮೇಲೆ ಇಡೀ ಸಕ್ಕರೆ ಕಾರ್ಖಾನೆ ಇರುತ್ತದೆ. ರೈತರ ಭವಿಷ್ಯ, ಬದುಕು, ಅಸ್ಥಿತ್ವ ಎಲ್ಲವೂ ಅವನ ಆಡಳಿತದ ಮೇಲೆ ನಿಯಂತ್ರಣವಾಗಿರತಕ್ಕದ್ದು. ನಾವು ತಮ್ಮಲ್ಲಿ ಕೇಳಿಕೊಳ್ಳುವುದೇನೆಂದರೆ ಅಲ್ಲಿಗೆ ಒಬ್ಬ ಸಮರ್ಥವಾಗಿ ಕೆಲಸ ಮಾಡತಕ್ಕ Cane Superintendent ಅನ್ನು ನೇಮಕ ಮಾಡಿಕೊಳ್ಳುವುದರ ಮೂಲಕ ಒಂದು ಕಡೆ ರೈತರ ಶೋಷಣೆಯನ್ನು ತಪ್ಪಿಸಬಹುದು ಇನ್ನೊಂದು ಕಡೆ ಸಕ್ಕರೆಯ ಉತ್ಪಾದನಾ ಸಾಮರ್ಥ್ಯವನ್ನು ಹೆಚ್ಚಿಸಬಹುದು. ಈ ರೀತಿಯ ವ್ಯವಸ್ಥೆ ಮಾಡುವುದಕ್ಕೆ ಸರ್ಕಾರ ಏನಾದರೂ ಪ್ರಯತ್ನ ಮಾಡುತ್ತದೆಯೆ? ಮತ್ತೆ ಸಕ್ಕರೆ ಎಷ್ಟು ಪ್ರಮಾಣದಲ್ಲಿ ಉತ್ಪಾದನೆಯಾಗುತ್ತದೆ ಎನ್ನತಕ್ಕದ್ದನ್ನು ಹೇಳಬೇಕು.

ಶ್ರೀ ಎನ್. ಚಿಕ್ಕೇಗೌಡ:- ಉಪಾಧ್ಯಕ್ಷಣಿಯವರೇ ಸಕ್ಕರೆ ಎಷ್ಟು ಉತ್ಪಾದನೆಯಾಗುತ್ತದೆ ಎನ್ನುವ ಬಗ್ಗೆ ನನ್ನಲ್ಲಿ ಅಂಕಿಸಂಖ್ಯೆಗಳು ಇಲ್ಲ. ಅದು ಕೈಗಾರಿಕಾ ಇಲಾಖೆಗೆ ಬರುತ್ತದೆ. ತಾವು ಬೇಕಾದರೆ ಪ್ರತ್ಯೇಕವಾಗಿ ಪ್ರಶ್ನೆಯನ್ನು ಕೇಳಿದರೆ ನಾನು ಆ ಮಾಹಿತಿಗಳನ್ನು ಒದಗಿಸುತ್ತೇನೆ. ತಾವು ಕೇಳಿರತಕ್ಕ ಉಪಪ್ರಶ್ನೆಗೆ ಉತ್ತರವನ್ನು ತರಿಸಿ ತಮಗೆ ಒದಗಿಸುತ್ತೇನೆ. ಮತ್ತೆ ತಾವು Cane Superintendent ಒಳ್ಳೆಯವರಾಗಿರಬೇಕು; ಅವರ ಸಕಾಲದಲ್ಲಿ ರೈತರಿಗೆ ಮಾಹಿತಿಯನ್ನು ಒದಗಿಸಬೇಕು. ಇಲ್ಲದಿದ್ದರೆ ರೈತರು ಬೆಳೆದಂತ ಕಬ್ಬು ಸಕಾಲದಲ್ಲಿ ಕಟಾವು ಆಗುವುದಿಲ್ಲವೆಂದು ಹೇಳಿದ್ದೀರಿ. ಅದರ ಜೊತೆಯಲ್ಲಿ ಕಬ್ಬನ್ನು ಅರೆಯತಕ್ಕ ಸಕ್ಕರೆ ಕಾರ್ಖಾನೆಗಳೇನಿವೆ ಅಲ್ಲಿ ಕಬ್ಬನ್ನು ಅರೆಯುವ ಶಕ್ತಿಯನ್ನು ಹೆಚ್ಚಿಸಬೇಕು ಇಲ್ಲದಿದ್ದರೆ ನಾವು ಹೊರ ರಾಜ್ಯಗಳಿಗೆ ಕಬ್ಬನ್ನು ಕಳುಹಿಸಲು ಅನುಮತಿಯನ್ನು ಕೊಡಬೇಕೆಂದು ಹೇಳಿದ್ದೀರಿ. ತಮಗೆ ಗೊತ್ತಿದೆ ನಮ್ಮ ಕರ್ನಾಟಕ ರಾಜ್ಯದ ಉದಾರ ನೀತಿ. ನಮ್ಮಲ್ಲಿ ಬೆಳೆದಂತ ಕಬ್ಬು ಒಣಗಿಹೋಗಿ ದಿನಗಳು ಹೆಚ್ಚಾದಂತೆ ಅದರಲ್ಲಿರುವ ಗ್ಲೂಕೋಸ್ ಕಂಟೆಂಟ್ ಕಡಿಮೆಯಾಗುತ್ತದೆ. ಆದುದರಿಂದ ನಾವು ಹೊರರಾಜ್ಯಗಳಿಗೆ ಕಬ್ಬನ್ನು ತೆಗೆದುಕೊಂಡು ಹೋಗಲು ಪರವಾನಿಗೆಯನ್ನು ಕೊಟ್ಟು ಅಲ್ಲಿ ಕಬ್ಬನ್ನು ಅರೆಯುವುದಕ್ಕೆ ಅನುಕೂಲ ಮಾಡಿಕೊಟ್ಟಿದ್ದೇವೆ.

ಶ್ರೀ ಕರಿಯಣ್ಣ:- ಉಪಾಧ್ಯಕ್ಷಣಿಯವರೇ, ಅವರು ಕಬ್ಬು ಒಣಗಿ ಹೋಗುತ್ತದೆ, ಆದ್ದರಿಂದ ಹೊರರಾಜ್ಯಗಳಿಗೆ ಕಬ್ಬನ್ನು ಕಳಿಸುತ್ತೇವೆಂದು ಹೇಳಿದ್ದಾರೆ. ಆದರೆ ಕಬ್ಬು ಕಡಿಮೆ ಇದ್ದಾಗ, ಸಕ್ಕರೆ ಕಾರ್ಖಾನೆಯ ವ್ಯಾಪ್ತಿಯಲ್ಲಿ ಬೆಳೆದು ಒಪ್ಪಂದವಾಗಿರತಕ್ಕ ಕಬ್ಬನ್ನು ಸಕ್ಕರೆ ಕಾರ್ಖಾನೆಗೆ ಕೊಡದೇ ಬೇರೆ ಕಡೆಗೆ ಕೊಟ್ಟರೆ ಅಂಥವರ ಮೇಲೆ ಕೇಸನ್ನು ಹಾಕುತ್ತಾರೆ ಮತ್ತು ಬೇರೆ ಕಡೆ ಕಬ್ಬನ್ನು ಕೊಟ್ಟಿದ್ದಾರೆಂದು ಅವರನ್ನು ಹಿಡಿದುಕೊಂಡು ಬಂದು ಕ್ರಿಮಿನಲ್ ಕೇಸನ್ನು ರಿಜಿಸ್ಟರ್ ಮಾಡುತ್ತಾರೆ. ಆದರೆ ಅಗ್ರಿಮೆಂಟ್ ಆದ ಕಬ್ಬನ್ನು ಸಕಾಲದಲ್ಲಿ ಅವರು ತೆಗೆದುಕೊಳ್ಳದಿದ್ದರೆ ಅಂತಹ ಕಾರ್ಖಾನೆಯವರ ಮೇಲೆ ಯಾವ ಕೇಸನ್ನು ಹಾಕುವುದಿಲ್ಲ. ರೈತರ ಮೇಲೆ ಮಾತ್ರ ಕೇಸನ್ನು ಹಾಕುತ್ತಾರೆ. ಅವನು ಕಾರ್ಖಾನೆಯನ್ನು ನಡೆಸುತ್ತಿರುತ್ತಾನೆ. ಒಪ್ಪಂದವಾದ ದಿನಾಂಕದೊಳಗೆ

ಕಬ್ಬನ್ನು ತೆಗೆದುಕೊಳ್ಳದೇ ಕಬ್ಬು ಒಣಗಿಹೋಗಿಬಿಟ್ಟರೆ ಕಾರ್ಖಾನೆಯವರ ಮೇಲೆ ಕೇಸ್ ಹಾಕುವುದಿಲ್ಲ. ಆದರೆ ಅವನೇನಾದರೂ ಒಪ್ಪಂದವಾಗಿರತಕ್ಕ ಕಬ್ಬನ್ನು ಬೇರೆ ಕಡೆ ಮಾರಿದರೆ ಅವನ ಮೇಲೆ ಕ್ರಿಮಿನಲ್ ಕೇಸನ್ನು ಹಾಕುತ್ತಾರೆ.

ಶ್ರೀ ಎನ್. ಚಿಕ್ಕೇಗೌಡ:- ಉಪಾಧ್ಯಕ್ಷಣಿಯವರೇ, ಈಗ ರೈತ ಬೆಳೆದಂತ ಕಬ್ಬನ್ನು ಒಪ್ಪಂದವನ್ನು ಬಿಟ್ಟು ಬೇರೆಯವರಿಗೆ ಮಾರಿದರೆ, ಬೇರೆ ಕಡೆಗೆ ವರ್ಗಾಯಿಸಿ ಉಪಯೋಗಿಸಿದರೆ ಕೇಸ್ ಹಾಕುತ್ತಾರೆ ಮತ್ತೆ ಕಾರ್ಖಾನೆಯವರು ಒಪ್ಪಂದದ ಪ್ರಕಾರ ಸಕಾಲದಲ್ಲಿ ಕಬ್ಬನ್ನು ತೆಗೆದುಕೊಳ್ಳದಿದ್ದರೆ ಫ್ಯಾಕ್ಟರಿಗೆ ಸಂಬಂಧಪಟ್ಟ ಆಕ್ಟಿನಲ್ಲಿ ಬರುತ್ತದೆ.

ಶ್ರೀಮತಿ ದಮಯಂತಿ ಬೋರೇಗೌಡ:- ನಿಮ್ಮ ವಿಳಂಬ ನೀತಿಯಿಂದ ರೈತರಿಗೆ ಕೋಟ್ಯಾಂತರ ರೂಪಾಯಿ ಲಾಸ್ ಆಗಿದೆ. ಇದಕ್ಕೆ ತಾವು ಏನು ಹೇಳುತ್ತೀರಿ?

ಶ್ರೀ ಎನ್. ಚಿಕ್ಕೇಗೌಡ:- ಸನ್ಮಾನ್ಯ ಉಪಾಧ್ಯಕ್ಷಣಿಯವರೇ, ಮಾನ್ಯ ಸದಸ್ಯಣಿಯವರು ಹೇಳಿದಂತಹ ಕಳಕಳಿ ಏನು ಇದೆ ಅದಕ್ಕೆ ನಾನು ಕೂಡ ಸ್ಪಂದಿಸುತ್ತೇನೆ. ಯಾರು ಅಗ್ರಿಮೆಂಟ್ ಮಾಡಿಕೊಂಡು ಅವರು ಸಕಾಲದಲ್ಲಿ ಕಬ್ಬನ್ನು ಅರೆದು ಅವರಿಗೆ ದೊರೆಕಬೇಕಾದಂತಹ ಹಣವನ್ನು ಕೊಡದೇ ಇರುವುದು ಬಹಳ ತಪ್ಪು, ಯಾರೇ ಆಗಿರಲಿ, ಸರ್ಕಾರದ ಯಾವುದೇ ನೀತಿಯಾಗಿರಲಿ, ಕೈಗಾರಿಕಾ ಇಲಾಖೆಯಾಗಿರಲಿ ಅಥವಾ ಕಬ್ಬಿನ ಫ್ಯಾಕ್ಟರಿಯವರಾಗಲಿ ಅವರು ಸಕಾಲದಲ್ಲಿ ಕಬ್ಬನ್ನು ತೆಗೆದುಕೊಂಡು ರೈತರಿಗೆ ಹಣ ಒದಗಿಸಬೇಕು. ರೈತರು 16-18 ತಿಂಗಳು ಕಬ್ಬು ಬೆಳೆಯುವುದಕ್ಕೆ ನೀರು ಕೊಟ್ಟು, ಗೊಬ್ಬರ ಕೊಟ್ಟು, ಭೂಮಿಯನ್ನು ಉಪಯೋಗಿಸಿ ಕಬ್ಬನ್ನು ಬೆಳೆದಾಗ ಅದನ್ನು ಸಕಾಲದಲ್ಲಿ ಅರೆಯದೇ ಹೋದರೆ ಅದು ತಪ್ಪಾಗುತ್ತದೆ.

ಉಪಾಧ್ಯಕ್ಷಣಿಯವರು:- ಅದು ತಪ್ಪು ಸರಿ, ಹಣ ಕೊಡುವುದಕ್ಕೆ ತಾವು ಏನು ಮಾಡುತ್ತೀರಿ?

ಶ್ರೀ ಎನ್. ಚಿಕ್ಕೇಗೌಡ:- ಇದು ನನ್ನ ಇಲಾಖೆಗೆ ಬರುವುದಿಲ್ಲ; ಆದರೂ ಕೂಡ ನಾನು ಅವರ ಜೊತೆಯಲ್ಲಿ ಸ್ಪಂದಿಸಿ ಹೇಳುತ್ತೇನೆ, ನಾನು ಏನಿದ್ದರೂ ಕಬ್ಬನ್ನು ಬೆಳೆಯುವರಿಗೆ ಮಾತ್ರ ಹೇಳಬಹುದು, ಬೆಳೆದ ಮೇಲೆ ಕಟಾವ್ ಆಗುವುದು, ತದನಂತರ ಅದನ್ನು ಅರೆಯುವುದು, ರಕ್ಷಣೆ ಕೊಡುವುದು, ಸಕಾಲದಲ್ಲಿ ಹಣ ಒದಗಿಸುವುದು, ಇದೆಲ್ಲಾ ಬೇರೆ ಇಲಾಖೆಗೆ ಬರುತ್ತದೆ.

ನಗರದ ಬೆಂಗಳೂರು ಡೈರಿಯ ಹಾಲು ಪಾರ್ಲರ್‌ಗಳ ಸಂಖ್ಯೆ.

453 (2131) ಶ್ರೀ ರಾಮಲಿಂಗ ರೆಡ್ಡಿ(ಜಯನಗರ)

ಪಶು ಸಂಗೋಪನಾ ಮತ್ತು ಪಶು ವೈದ್ಯ ಸೇವಾ ಇಲಾಖೆಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :-

ಅ) ಬೆಂಗಳೂರು ನಗರದಲ್ಲಿ ಕಾರ್ಯಾಚರಣೆಯಲ್ಲಿರುವ ಬೆಂಗಳೂರು ಡೈರಿಯ ಹಾಲು ಪಾರ್ಲರ್‌ಗಳ ಸಂಖ್ಯೆ ಎಷ್ಟು;

ಆ) ಇದರಲ್ಲಿ ಗುತ್ತಿಗೆ ಅವಧಿ ಮುಗಿದ ಮೇಲೆ ಮುಚ್ಚಿರುವ ಪಾರ್ಲರ್‌ಗಳ ಸಂಖ್ಯೆ ಎಷ್ಟು;

ಇ) ಹೊಸ ಗುತ್ತಿಗೆ ನೀಡಲು ಅರ್ಜಿಗಳನ್ನು ಕರೆಯಲಾಗಿದೆಯೇ;

ಈ) ಹಾಗಿದ್ದಲ್ಲಿ, ಪ್ರಸ್ತುತ ಮುಚ್ಚಿರುವ ಹಾಲು ಗುತ್ತಿಗೆ ನೀಡಲು ತೆಗೆದ ಕೊಂಡಿರುವ ಕ್ರಮವೇನು?

ಶ್ರೀ ಬಸವರಾಜ್ ಪಾಟೀಲ್(ಪಶು ಸಂಗೋಪನಾ ಮತ್ತು ಪಶು ವೈದ್ಯ ಸೇವಾ ಸಚಿವರು)-

ಅ) 9